ಆಳ್ವಿಕೆಯನ್ನು ಜನ ನೆನಪು ಮಾಡಿ ಕೊಳ್ಳುತ್ತಾರೆ ರಾಜಕಾರಣಿಗಳು ಅಸಹಾಯಕರಲ್ಲ You can initiate action

ಅಧ್ಯಕ್ಷರು. ನಾನು ಅಸಹಾಯಕ ಅಂತ ಹೇಳುತ್ತಿಲ್ಲ, ಅಸಹಾಯಕರು ಅಂತ ಮಂತ್ರಿಮಂಡಲದಲ್ಲಿ ಹೇಳಿದ್ದನ್ನು ಹೇಳಿದೆ ಅಷ್ಟೇ ಯಾಕೆ ಸುಮ್ಮನೆ ಅದೆಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಇನ್ನು 2–3 ದಿವಸಗಳಲ್ಲೇ ಈ ವಿಷಯಕ್ಕೆ ಸಂಬಂಧಪಟ್ಟ ಸಂಪೂರ್ಣ ಮಾಹಿತಿ ತರಿಸಿಕೊಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಅಧ್ಯಕ್ಷರಿಗೆ ಪರಮಾಧಿಕಾರವಿದೆ ಈ ರಾಜ್ಯದಲ್ಲಿ ಯಾರಿಗೂ ಇಲ್ಲ ನಿಮ್ಮ ಶಕ್ತಿ ಏನು ಅಂತ ನಿಮಗೇ ಗೊತ್ತಿಲ್ಲ ಅದಕ್ಕೆ ನಿಮ್ಮನ್ನು ಇಷ್ಟೊಂದು ಶಕ್ತಿಯಿರುವ ಪೀಠದಲ್ಲಿ ಕೂರಿಸಿರುವುದು, ಇಲ್ಲದಿದ್ದರೆ ಕೆಳಗೆ ಕೂರಿಸಿಬಿಡಬಹುದಿತ್ತು ಅಧಿಕಾರಿಗಳನ್ನು ಕರೆದು ನೀವು ಛೀಮಾರಿ ಹಾಕಬಹುದು ಆ ಸ್ಥಾನದಿಂದ ಏನೆಲ್ಲ ನಡೆದಿದೆ?

ಅಧ್ಯಕ್ಷರು ಆಯಿತು, ನಾನು Chief Secretary ಯವರನ್ನು ಕರೆಸಿ ಈ ಪ್ರಶ್ನೆ ಒಂದೇ ಅಲ್ಲ, ಅನೇಕ ಪ್ರಶ್ನೆಗಳು ಯಾಕೆ ಹೀಗಾಗುತ್ತವೆ ಅಂತ ಮಾಡನಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಆ ಪ್ರಶ್ನೆಗೆ ಎರಡು ನಿಮಿಷದಲ್ಲಿ ಉತ್ತರ ಕೊಡಬಹುದು ಅಧಿಕಾರಿಗಳ ನಂಖ್ಯೆ ಎಷ್ಟು ಎನ್ನುವುದು computerನಲ್ಲಿರುತ್ತದೆ, ಅದಕ್ಕೆ 15 ದಿವಸ time ಬೇಕಾ? ನೀವು ಪ್ರಶ್ನೆಗಳನ್ನು ರಿವ್ಯೂ ಮಾಡಬೇಕು

ಹಿಂದುಳಿದಿರುವ ತಾಲ್ಲೂಕುಗಳಿಗೆ 110 ಕೆವಿ ಲೈನನ್ನು ಅಳವಡಿಸುವುದು

152(156) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಪರವಾಗಿ ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿರುವ ಗುಲ್ಬರ್ಗಾ ವಿಭಾಗದ 26 ತಾಲ್ಲೂಕುಗಳಲ್ಲಿ ಗುಣಮಟ್ಟದ ವಿದ್ಯುತ್ ದೊರಕದೆ ರೈತರಿಗೆ ಹಾಗೂ ಗೃಹ ಬಳಕೆದಾರರಿಗೆ ತೊಂದರೆಯಾಗಿರುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು,

ಅ) ಈ ತಾಲ್ಲೂಕುಗಳಿಗೆ 110 ಹಾಗೂ 11 ಕೆ ವಿ ಲೈನ್ ವಿದ್ಯುತ್ ವಿತರಣೆ ಕೇಂದ್ರಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಡಾ ನಂಜುಂಡಪ್ಪ ರವರ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿರುವ ಗುಲ್ಬರ್ಗಾ ವಿಭಾಗದ 26 ತಾಲ್ಲೂಕುಗಳಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ

ಕವಿಪ್ರನಿನಿ ವತಿಯಿಂದ –

1 ಸುಮಾರು 481 ಕೋಟಿ ರೂ ಗಳ ವೆಚ್ಚದಲ್ಲಿ ಒಟ್ಟು 52 ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಾಣ ಮಾಡಲಾಗುತ್ತಿದೆ

2 ಸುಮಾರು 41 ಕೋಟಿ ರೂ ಗಳ ವೆಚ್ಚದಲ್ಲಿ 21 ವಿದ್ಯುತ್ ಉಪಕೇಂದ್ರಗಳ ಬಲವರ್ಧನೆ ಮಾಡಲಾಗುತ್ತಿದೆ

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವತಿಯಿಂದ –

1 ಸುಮಾರು 96 ಕೋಟಿ ರೂ ಗಳ ವೆಚ್ಚದಲ್ಲಿ 24 ಹೊಸ 33/11 ಕೆ ವಿ ವಿದ್ಯುತ್ ಉಪಕೇಂದ್ರಗಳನ್ನು ನಿರ್ಮಾಣ ಮಾಡಲಾಗುವುದು ಮುಂದಿನ 5 ವರ್ಷಗಳಲ್ಲಿ ಇನ್ನೂ 77 ಹೊಸ 33/11 ಕೆ ವಿ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ

2 ವಿದ್ಯುತ್ ವಿತರಣಾ ಜಾಲದ ಸುಧಾರಣೆಗಾಗಿ ಗುಲ್ಬರ್ಗಾ, ರಾಯಚೂರು, ಬೀದರ್, ಬಸವಕಲ್ಯಾಣ, ಯಾಧಗಿರಿ, ಶಹಬಾದ್, ಕೊಪ್ಪಳ, ಗಂಗಾವತಿ ಮತ್ತು ಹೊಸಪೇಟೆ ಪಟ್ಟಣಗಳಲ್ಲಿ ಒಟ್ಟು 88 ಕೋಟಿ ರೂ ಗಳು ವೆಚ್ಚದಲ್ಲಿ ತ್ವರಿತ ವಿದ್ಯುಚ್ಛಕ್ತಿ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿ (ಎಪಿಡಿಆರ್‌ಪಿ) ಕಾಮಗಾರಿಗಳ ಅನುಷ್ಠಾನ

3 11500 ಕಿಮೀ 11 ಕೆ ವಿ ವಿದ್ಯುತ್ ಮಾರ್ಗಗಳು ಹಾಗೂ 1702 ಕಿಮೀ 33 ಕೆ ವಿ ವಿದ್ಯುತ್ ಮಾರ್ಗಗಳಿಗೆ ಹೆಚ್ಚಿನ ಗಾತ್ರದ ವಿದ್ಯುತ್ ವಾಹಕಗಳನ್ನು ಅಳವಡಿಸಿ ವಿದ್ಯುತ್ ನಷ್ಟವನ್ನು ಕಡಿಮೆ ಮಾಡುವುದು

4 154 10 ಕೋಟಿ ರೂಪಾಯಿಗಳ ವೆಚ್ಚದಲ್ಲಿ 171 ಫೀಡರ್‌ಗಳಿಗೆ ಆರ್ ಎಲ್ ಎಮ್ ಎಸ್ ಯೋಜನೆಯ ಅನುಷ್ಠಾನ

5 ರಾಜೀವಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯ ಅಡಿಯಲ್ಲಿ ಸುಮಾರು 118 ಕೋಟಿ ರೂ ವೆಚ್ಚದಲ್ಲಿ 7,502 ಜನವಸತಿ ಪ್ರದೇಶಗಳು ಮತ್ತು 188 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮನೆಗಳೂ ಸೇರಿದಂತೆ ಸುಮಾರು ಒಟ್ಟು 380 ಲಕ್ಷ ಗ್ರಾಮೀಣ ಪ್ರದೇಶಗಳ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಿಕೆ

ಆ) 11 ಕೆವಿ ವಿದ್ಯುತ್ ವಿತರಣಾ ಕೇಂದ್ರಗಳು ಇರುವುದಿಲ್ಲ ಆದುದರಿಂದ ಇವುಗಳನ್ನು ಈ ತಾಲ್ಲೂಕುಗಳಲ್ಲಿ ಮಂಜೂರು ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ 110 ಕೆವಿ ಹೊಸ ವಿದ್ಯುತ್ ಕೇಂದ್ರಗಳನ್ನು ಮಂಜೂರು ಮಾಡಲು ಪರಿಶೀಲಿಸಲಾಗುತ್ತಿದೆ

ಶ್ರೀ ಎಸ್ ಎಸ್ ಪಾಟೀಲ್ [ಬಾದರ್ಲಿ ಹಂಪನಗೌಡರ ಪರವಾಗಿ]. ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ ತೆಗೆದುಕೊಂಡ ಕ್ರಮಗಳನ್ನು ಕೊಟ್ಟಿದ್ದಾರೆ ಅಂದರೆ ಅಲ್ಲಿ ಸರಿಯಾಗಿ ವಿದ್ಯುತ್ ಪೂರೈಕೆಯಾಗುವುದಿಲ್ಲವೆಂದು ಒಪ್ಪಿಕೊಂಡು ಇಂತಿಂಥ ಕ್ರಮ ತೆಗೆದುಕೊಳ್ಳುತ್ತೇವೆ ಅಂತ ಹೇಳಿದ್ದಾರೆ ಇವನ್ನೆಲ್ಲ ಜರುಗಿಸಿದರೆ ಮಾತ್ರ ಸುಧಾರಿಸುವುದು, ಅಂದರೆ ಈ ಕ್ರಮ ಜರುಗಿಸಲು ಎಷ್ಟು ವರ್ಷ ತಿಂಗಳು ಬೇಕು, ಅಂತ ನಿಖರವಾಗಿ ಹೇಳಬೇಕು ಆಮೇಲೆ ಎರಡನೇ ಪ್ರಶ್ನೆಗೆ 11 ಕೆವಿ ವಿದ್ಯುತ್ ವಿತರಣ ಕೇಂದ್ರಗಳಿಲ್ಲವೆಂದು ಹೇಳಿದ್ದೀರಿ ಆದರೆ ಮೊದಲನೇ ಪ್ರಶ್ನೆ ಉತ್ತರದಲ್ಲಿ ಇವೆ ಎಂದಿದ್ದೀರಿ ಇದರಲ್ಲಿ ಯಾವುದು ಸರಿ?

ಶ್ರೀ ಹೆಚ್ ಡಿ ರೇವಣ್ಣ ಅಧ್ಯಕ್ಷರೇ, 26 ತಾಲ್ಲೂಕಿನಲ್ಲಿ ಈಗ 53 ಹೊಸ ಉಪ ಕೇಂದ್ರಗಳನ್ನು ಮಾಡುತ್ತಿದ್ದೇವೆ 471 ಕೋಟಿ ಖರ್ಚು ಮಾಡುತ್ತಿದ್ದೇವೆ ಅದೇ ರೀತಿ 41 ಕೋಟಿ ವೆಚ್ಚದಲ್ಲಿ 21 ಉಪ ಕೇಂದ್ರಗಳನ್ನು upgrade ಮಾಡುತ್ತಿದ್ದೇವೆ ಒಂದು ಉಪ ಕೇಂದ್ರವಾಗಲು ಕನಿಷ್ಟ 10ರಿಂದ 12 ತಿಂಗಳು ಬೇಕು, ಲೈನ್ ಎಳೆಯಲು ಜಮೀನಿನ ತಂಟೆ ತಕರಾರಿದ್ದರೆ ತಡವಾಗುತ್ತದೆ ಬಾಕಿ ಕೆಲಸವನ್ನು ಆದಷ್ಟು ಬೇಗ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ ತಾವು ಹೇಳಿದಂತೆ ಒಂದು ವರ್ಷದಲ್ಲಿ ಇವಿಷ್ಟನ್ನೂ ಮುಗಿಸುತ್ತೀರಾ?

ಶ್ರೀ ಹೆಚ್ ಡಿ ರೇವಣ್ಣ ಅದಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ ಜಮೀನು ಬಿಡಬೇಕಾದರೆ ಕೋರ್ಟ್‌ಗೆ ಹೋಗುತ್ತಾರೆ, ಅಂಥವಿಲ್ಲದಿದ್ದ ಕಡೆ ಮಾಡಲು ಪ್ರಯತ್ನ ಮಾಡುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ ನೀವು ಹೇಳುವುದನ್ನೆಲ್ಲಾ ನೋಡಿದರೆ ಇದನ್ನು ಮಾಡಲು ಎಷ್ಟು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ?

ಶ್ರೀ ಹೆಚ್ ಡಿ ರೇವಣ್ಣ ಸುಮಾರು ಒಂದೂವರೆ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ

ಶ್ರೀ ಎಸ್ ಎಸ್ ಪಾಟೀಲ್ ಇದೊಂದೆ ಭಾಗದಲ್ಲಿ ಅಲ್ಲ ಇಡೀ ರಾಜ್ಯದಲ್ಲಿ ವಿದ್ಯುತ್‌ಗೆ ತೊಂದರೆ ಇದೆ ಇದು ಹಿಂದುಳಿದ ತಾಲ್ಲೂಕು ಇದನ್ನು ಯಾವಾಗ ಮಾಡುತ್ತೀರಿ ಎಂದು ತಾವು ನಿಖರವಾಗಿ ಹೇಳಬೇಕು

ಶ್ರೀ ಹೆಚ್ ಡಿ ರೇವಣ್ಣ System improvementಗೆ ಸಾಕಷ್ಟು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ ಪಿ ಪ್ರಕಾಶ್ (ಕಾನೂನು, ಸಂಸದೀಯ ಮತ್ತು ಗೃಹ ಇಲಾಖೆ ಸಚಿವರು) ಮಾನ್ಯ ಅಧ್ಯಕ್ಷರೇ, ದಿನಾಂಕ 12 02 2007 ರಂದು 10ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು, ತಡೆಹಿಡಿಯಲಾದ 2 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 99 ಪ್ರಶ್ನೆಗಳ ಪೈಕಿ 81 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ ಮತ್ತು ದಿನಾಂಕ 13 02 2007 ರಂದು 11 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 156 ಪ್ರಶ್ನೆಗಳ ಪೈಕಿ 100 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು (ಅನುಬಂಧ–ಅ)

2 ಶೂನ್ಯ ವೇಳೆ

ಅ) ವಿಷಯ ಕಾವೇರಿ ನ್ಯಾಯಮಂಡಳಿ ತೀರ್ಪಿನ ಬಗ್ಗೆ

ಶ್ರೀ ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ನಿನ್ನೆ ಕರ್ನಾಟಕದಲ್ಲಿ ವಾಟಾಳ್ ನಾಗರಾಜ್‌ರವರು ಮತ್ತು ಇತರ ಜನರು ಕೊಟ್ಟ ಬಂದ್‌ಗೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ ನಾವು ಕೂಡ Business Advisory Committee ಯಲ್ಲಿ ಇವತ್ತು ಸಭೆ ಆಗಬಾರದು